ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ತುಮಕೂರು ಇವರ ಅಧ್ಯಕ್ಷತೆಯಲ್ಲಿ ಪಾವಗಡ ತಾಲ್ಲೂಕು ನಾಗಲಮಡಿಕೆ ಹೋಬಳಿ ತಿರುಮಣಿ ಗ್ರಾಮದಲ್ಲಿ ದಿನಾಂಕ:28.09.2015 ರಂದು 11.30 ಗಂಟೆಗೆ ನಡೆದ ಸಭೆಯ ನಡಾವಳಿಗಳು:

ವಿಷಯ: ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು ಗ್ರಾಮಗಳಲ್ಲಿ ಕರ್ನಾಟಕ ಸೋಲಾರ್ ಪವರ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಪ್ರೈ. ಲಿ.ವತಿಯಿಂದ ಸೋಲಾರ್ ಪಾರ್ಕ್‌ನ್ನು ಸ್ಥಾಪಿಸಲು ಉದ್ದೇಶಿಸಿರುವ ಜಮೀನುಗಳಿಗೆ ಗುತ್ತಿಗೆ ದರ ನಿಗದಿಪಡಿಸಲು ಸಭೆ ಕರೆದಿರುವ ಬಗ್ಗೆ

ಹಾಜರಿದ್ದವರು:-

1. ಮಾನ್ಯ ಇಂಧನ ಖಾತೆ ಸಚಿವರು, ಕರ್ನಾಟಕ ಸರ್ಕಾರ
2. ಮಾನ್ಯ ಚಿತ್ರದುರ್ಗ ಲೋಕಸಭಾ ಸದಸ್ಯರು, ಚಿತ್ರದುರ್ಗ ಕ್ಷೇತ್ರ, ಚಿತ್ರದುರ್ಗ
3. ಶ್ರೀ.ಉಗ್ರಪ್ಪ ಮಾನ್ಯ ವಿಧಾನಪರಿಷತ್ ಸದಸ್ಯರು.
4. ಜಿಲ್ಲಾಪಂಚಾಯತ್ ಉಪಾಧ್ಯಕ್ಷರು, ಜಿಲ್ಲಾಪಂಚಾಯತ್, ತುಮಕೂರು.
5. ತಾಲ್ಲೂಕು ಪಂಚಾಯತ್ ಸದಸ್ಯರು, ಗ್ರಾಮಪಂಚಾಯತಿ ಅಧ್ಯಕ್ಷರು ಹಾಗೂ ಇತರರು.
6. ಜಿಲ್ಲಾಧಿಕಾರಿಗಳು – ಅಧ್ಯಕ್ಷರು
7. ವ್ಯವಸ್ಥಾಪಕ ನಿರ್ದೇಶಕರು – ಸದಸ್ಯರು/ಸಂಚಾಲಕರು
   ಕೆ.ಆರ್.ಇ.ಡಿ.ಎಲ್.
8. ಉಪವಿಭಾಗಾಧಿಕಾರಿಗಳು- ಸದಸ್ಯರು
   ಮಧುಗಿರಿ ಉಪವಿಭಾಗ
   ಮಧುಗಿರಿ.
9. ಜಂಟಿ ನಿರ್ದೇಶಕರು ಕೃಷಿ ಇಲಾಖೆ – ಸದಸ್ಯರು
   ತುಮಕೂರು
10. ಮುಖ್ಯ ಇಂಜಿನೀಯರ್ – ಆಹ್ವಾನಿತರು
    ಕೆ.ಪಿ.ಟಿ.ಸಿ.ಎಲ್. (ಪ್ರತಿನಿಧಿಗಳು)
11. ಉಪನಿರ್ದೇಶಕರು – ಆಹ್ವಾನಿತರು
    ತೋಟಗಾರಿಕೆ ಇಲಾಖೆ (ಪ್ರತಿನಿಧಿಗಳು)
12. ಆಡಳಿತಾಧಿಕಾರಿಗಳು – ಆಹ್ವಾನಿತರು
    ಕೆ.ಆರ್.ಇ.ಡಿ.ಎಲ್.
13. ತಹಶೀಲ್ದಾರ್ ಪಾವಗಡ – ಆಹ್ವಾನಿತರು
14. ನಾಗಲಮಡಿಕೆ, ಹೋಬಳಿ ವಳ್ಳೂರು, ಕ್ಯಾತಗಾನಚರ್ಲು, ಬಳಸಮುದ್ರ, ತಿರುಮಣಿ ಮತ್ತು ರಾಯಚರ್ಲು ಗ್ರಾಮದ ಭೂಮಾಲೀಕರು.

29/10/15
MD KREDL
AGM (SP)
GT. AO.
Put 2
29/X

KP

ಮೇಲ್ಕಂಡ ವಿಷಯದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇ ಎನ್ 26 ಪಿ ಎಸ್ ಪ 2015 ದಿನಾಂಕ:27.08.2015 ರಂತೆ ರಚಿಸಿರುವ ಸಮಿತಿಯು ಸಭೆಗೆ ಜಿಲ್ಲಾಧಿಕಾರಿಗಳು, ತುಮಕೂರು ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದ ಸಮಿತಿ ಸದಸ್ಯರು ಮತ್ತು ಆಹ್ವಾನಿತರನ್ನು ವ್ಯವಸ್ಥಾಪಕ ನಿರ್ದೇಶಕರು ಕೆ.ಆರ್.ಇ.ಡಿ.ಎಲ್. ಇವರು ಸ್ವಾಗತಿಸಿದರು ಮತ್ತು ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳನ್ನು ಸಭೆ ನಡೆಸಿಕೊಡುವಂತೆ ಕೋರಿದರು. ಹಾಗೂ ಸಭೆಯಲ್ಲಿ ಹಾಜರಿದ್ದ ಮಾನ್ಯ ಇಂಧನ ಸಚಿವರು, ಮಾನ್ಯ ಲೋಕಸಭಾಸದಸ್ಯರು , ಚಿತ್ರದುರ್ಗ ಲೋಕಸಭಾ ಕ್ಷೇತ್ರ, ಮಾನ್ಯ ವಿಧಾನ ಪರಿಷತ್ ಸದಸ್ಯರು ಹಾಗೂ ಮಾನ್ಯ ಶಾಸಕರು, ಪಾವಗಡ ವಿಧಾನಸಭಾ ಕ್ಷೇತ್ರ ರವರಿಗೆ ಸಭೆಗೆ ಸ್ವಾಗತ ಕೋರಿದರು.

ಮಾನ್ಯ ಇಂಧನ ಸಚಿವರು ಮಾತನಾಡಿ ರಾಜ್ಯದಲ್ಲಿ ವಿವಿಧ ವರ್ಗದ ಜನರು ವಿವಿಧ ವೃತ್ತಿಗಳನ್ನು ಮಾಡುತ್ತಿದ್ದು ಪಾವಗಡ ತಾಲ್ಲೂಕಿನಲ್ಲಿ ಬೆಳೆ ಬೆಳೆಯಲು ಮಳೆಯನ್ನು ಹೊರತುಪಡಿಸಿ ಯಾವುದೇ ನೀರಾವರಿ ಸೌಲಭ್ಯ ಇರುವುದಿಲ್ಲ ಮಳೆಯನ್ನೇ ನಂಬಿ ಜೀವನ ಸಾಗಿಸುತ್ತಿರುತ್ತಾರೆ. ಹಣಕ್ಕಾಗಿ ರೈತ ತನ್ನ ಜಮೀನನ್ನು ಮಾರಿಕೊಳ್ಳುತ್ತಾನೆ ಸಾಲ ಮಾಡಿ ಆತ್ಮಹತ್ಯೆಗೆ ಶರಣಾಗುತ್ತಾನೆ. ಇದನ್ನು ತಪ್ಪಿಸಲು ಸರ್ಕಾರ ಪಾವಗಡ ತಾಲ್ಲೂಕಿನ ವಳ್ಳೂರು, ಕ್ಯಾತಗಾನಚೆರ್ಲು, ಬಳ್ಳಸಮುದ್ರ, ತಿರುಮಣಿ ಮತ್ತು ರಾಯಚೆರ್ಲು ಗ್ರಾಮದ ಭೂಮಾಲೀಕರಿಗೆ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಜಮೀನು ಪಡೆದು 2000 ಮೆಗಾವ್ಯಾಟ್ ಸೋಲಾರ್ ವಿದ್ಯುತ್ ಉತ್ಪಾದನಾ ಸ್ಥಾವರ ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದರಿಂದ ಪಾವಗಡ ತಾಲ್ಲೂಕಿಗೆ ದೊಡ್ಡಮಟ್ಟದಲ್ಲಿ ಬಂಡವಾಳ ಹರಿದುಬರಲಿದ್ದು ಎಲ್ಲಾ ರೀತಿಯಿಂದಲೂ ಅಭಿವೃದ್ಧಿಯಾಗುವ ಸಾಧ್ಯತೆ ಇರುತ್ತದೆ. ಸೋಲಾರ್ ಪಾರ್ಕ್ ಸ್ಥಾಪನೆಯಾದ ನಂತರ ಸ್ಥಳೀಯರಿಗೆ ಉದ್ಯೋಗದಲ್ಲಿ ಆದ್ಯತೆ ನೀಡಲಾಗುವುದು. ಈಗಾಗಲೇ ಸುಮಾರು 11480 ಎಕರೆ , ಸುಮಾರು 1990 ಖಾತೆದಾರರು ಸೋಲಾರ್ ಪಾರ್ಕ್ ಸ್ಥಾಪಿಸಲು ಜಮೀನು ಗುತ್ತಿಗೆ ನೀಡಲು ಒಪ್ಪಿದ್ದು, ಗುತ್ತಿಗೆ ನೀಡಲು ಇಚ್ಛಿಸುವ ಭೂಮಾಲೀಕರು ದಿನಾಂಕ 31-10-2015 ರೊಳಗೆ ಜಮೀನು ಗುತ್ತಿಗೆ ನೀಡಲು ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಭೂವ್ಯವಹಾರಕ್ಕೆ ಸಂಬಂಧಿಸಿದಂತೆ ಪವತಿ ಖಾತೆ, ಜಂಟಿ ಖಾತೆ, ಪಹಣಿ ಕಲಂ 3 ಮತ್ತು 9 ವ್ಯತ್ಯಾಸ ಹಾಗೂ ಭೂಪರಿವರ್ತನೆಯನ್ನು ಕಂದಾಯ ಇಲಾಖೆಯಿಂದ ಸರ್ಕಾರದ ಮುಖಾಂತರ ನಿರ್ವಹಿಸಲಿದ್ದು ಭೂಮಾಲೀಕರು ನೋಂದಣಿ ಶುಲ್ಕವನ್ನು ಭರಿಸುವಂತಿಲ್ಲ ಅದನ್ನು ಸಹ ಸರ್ಕಾರವೇ ಭರಿಸುತ್ತದೆ ಈ ಯೋಜನೆ ಪ್ರಾರಂಭಿಸಿದ ನಂತರ ಈ ಯೋಜನೆಯನ್ನು ಪಾವಗಡ ತಾಲ್ಲೂಕಿನ ಉಳಿದ ಹೋಬಳಿಗಳಿಗೂ ವಿಸ್ತರಿಸುವ ಬಗ್ಗೆ ಪರಿಶೀಲಿಸಲಾಗುವುದು ಎಂದು ತಿಳಿಸಿದರು. ಜಮೀನು ಸರ್ಕಾರಕ್ಕೆ ಗುತ್ತಿಗೆ ನೀಡಲು ಗುತ್ತಿಗೆ ಮೊತ್ತದ ಬಗ್ಗೆ ಸಲಹೆ ಸೂಚನೆಗಳನ್ನು ನೀಡಲು 5 ಗ್ರಾಮದ ರೈತ ಮುಖಂಡರಿಗೆ ಕೋರಲಾಯಿತು.

ತಿರುಮಣಿ ಗ್ರಾಮದ ರೈತರಾದ ಶ್ರೀ.ಸಾಂಬಶಿವರೆಡ್ಡಿ ರವರು ಮಾತನಾಡಿ ಪಾವಗಡ ತಾಲ್ಲೂಕು ನಂಜುಂಡಪ್ಪ ವರದಿಯಂತೆ ಅತಿ ಹಿಂದುಳಿದ ತಾಲ್ಲೂಕು ಆಗಿದ್ದು ಇವರು ಫ್ಲೋರೈಡ್ ಸಮಸ್ಯೆಯಿಂದ ಬಳಲುತ್ತಿದ್ದಾರೆ ಹಾಗೂ ಮಳೆಯನ್ನೇ ನಂಬಿಕೊಂಡು ಜೀವನ ಸಾಗಿಸುತ್ತಿದ್ದು ತಾಲ್ಲೂಕಿನಲ್ಲಿ ಹೆಚ್ಚಿನ ನೀರಾವರಿ

ಸೌಲಭ್ಯವಿರುವುದಿಲ್ಲ. ಸದರಿ ಗ್ರಾಮಗಳಲ್ಲಿ ಪ್ರತಿ ಎಕರೆಗೆ ಮಾರುಕಟ್ಟೆ ಮೌಲ್ಯ ಉಪನೋಂದಣಾಧಿಕಾರಿಗಳ ಕಛೇರಿಯ ವರದಿಯಂತೆ ರೂ ಇದ್ದು 35000/- ಇಲ್ಲಿನ ಜನರಿಗೆ ಅತಿ ಹೆಚ್ಚಿನ ಗುತ್ತಿಗೆ ಮೊತ್ತ ನೀಡಬೇಕು ಹಾಗೂ ಪ್ರತಿ ವರ್ಷ ಕನಿಷ್ಠ ಗುತ್ತಿಗೆ ಮೊತ್ತ ಹೆಚ್ಚಿಸ ಬೇಕೆಂದು ಕೋರಿ ಮಾನ್ಯ ಸಚಿವರಿಗೆ ಮನವಿ ಸಲ್ಲಿಸಿದರು.

ಶ್ರೀ.ಪುರುಷೋತ್ತಮ ರೆಡ್ಡಿ ರವರು ಮಾತನಾಡಿ ಪಾವಗಡ ತಾಲ್ಲೂಕು ಅತಿ ಹಿಂದುಳಿದ ತಾಲ್ಲೂಕು ಆಗಿದ್ದು ಫ್ಲೋರೈಡ್ ಸಮಸ್ಯೆಯಿಂದ ಬಳಲುತ್ತಿದ್ದಾರೆ ಪ್ರತಿವರ್ಷಕ್ಕೆ ಪ್ರತಿ ಎಕರೆಗೆ ಕನಿಷ್ಠ ರೂ 40000/- ಗಳಿಗೆ ನಿಗಧಿಪಡಿಸಬೇಕು , ಪ್ರತಿವರ್ಷ ಶೇಕಡಾ 10 ರಷ್ಟು ಹೆಚ್ಚಿಸಬೇಕು, ಇದಕ್ಕೆ ತಗಲುವ ನೋಂದಣಿಶುಲ್ಕ ಸರ್ಕಾರವೇ ಭರಿಸಬೇಕು ಎಂದು ಸಚಿವರಿಗೆ ಭೂಮಾಲೀಕರ ಪರವಾಗಿ ಕೋರಿದರು.

ರೈತ ಪ್ರತಿನಿಧಿಯೊಬ್ಬರು ಮಾತನಾಡಿ ಗುತ್ತಿಗೆ ನಿಗಧಿಪಡಿಸುವ ಬಗ್ಗೆ ನೇರವಾಗಿ ರೈತರು ಮತ್ತು ಸಚಿವರು , ಶಾಸಕರೊಂದಿಗೆ ಚರ್ಚಿಸಿ ತೀರ್ಮಾನ ಮಾಡಬಹುದು ಆದಕಾರಣ ಅಧಿಕಾರಿಗಳು ಅವಶ್ಯಕತೆ ಇಲ್ಲ ಎಂದು ಹೇಳಿದರು.

ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ ಸೋಲಾರ್ ಪಾರ್ಕ್‌ಗೆ ಒಳಪಡುವ ಜಮೀನುಗಳ ಗುತ್ತಿಗೆ ದರ ನಿಗಧಿಪಡಿಸಲು ಸರ್ಕಾರವು 27-08-2015 ರಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಗುತ್ತಿಗೆ ದರ ನಿರ್ಧರಣಾ ಸಮಿತಿ ರಚಿಸಿದ್ದು ಸದರಿ ಸಮಿತಿಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್ ರವರು ಸಂಚಾಲಕರಾಗಿರುತ್ತಾರೆ, ಜಂಟಿ ನಿರ್ದೇಶಕರು ಕೃಷಿ ಇಲಾಖೆ , ಉಪನಿರ್ದೇಶಕರು ತೋಟಗಾರಿಕೆ ಇಲಾಖೆ ಹಾಗೂ ಉಪವಿಭಾಗಾಧಿಕಾರಿಗಳು ಸದಸ್ಯರಾಗಿರುತ್ತಾರೆ ಗುತ್ತಿಗೆ ದರ ನಿಗಧಿಪಡಿಸಲು ಆದೇಶಿಸಿದ್ದು ಅದರಂತೆ ಅಧಿಕಾರಿಗಳು ಸಭೆಗೆ ಬಂದಿರುವುದಾಗಿ ಹಾಗೂ ಸದರಿ ಸಭೆಯಲ್ಲಿ ಗುತ್ತಿಗೆ ದರ ಸಂಬಂಧ ಅಂತಿಮ ತೀರ್ಮಾನ ವಾಗದಿದ್ದರೆ ಅವಶ್ಯವಿದ್ದಲ್ಲಿ ಮತ್ತೊಮ್ಮೆ ಭೂಮಾಲೀಕರೊಂದಿಗೆ ಸಭೆ ನಡೆಸುವುದಾಗಿ ತಿಳಿಸಿದರು.

ಸ್ಥಳೀಯ ಶಾಸಕರು ಮಾತನಾಡಿ ಮಾನ್ಯ ಇಂಧನ ಸಚಿವರು ಪಾವಗಡ ತಾಲ್ಲೂಕಿನ ಜನತೆಗೆ ಈ ಯೋಜನೆಯನ್ನು ನೀಡಿರುವುದು ಶ್ಲಾಘನೀಯವಾಗಿದೆ. ಪಾವಗಡ ತಾಲ್ಲೂಕು ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು ಕರ್ನಾಟಕ ರಾಜ್ಯದಲ್ಲಿಯೇ ಅತಿ ಕಡಿಮೆ ಮಳೆ ಬೀಳುವ ಪ್ರದೇಶವಾಗಿರುತ್ತದೆ. ಬರಗಾಲ ಪೀಡಿತ ತಾಲ್ಲೂಕು ಆಗಿರುತ್ತದೆ. ಪಾವಗಡ ತಾಲ್ಲೂಕಿನಲ್ಲಿ ಸುಮಾರು 40 ಹೆಕ್ಟೇರ್ ತೋಟಗಾರಿಕೆ ಬೆಳೆ ಬೆಳೆಯುತ್ತಿದ್ದು ವಿದ್ಯುತ್ ಸಮಸ್ಯೆಯಿಂದಾಗಿ ನಷ್ಟವಾಗುವ ಸಂಭವ ವಿರುತ್ತದೆ. ವಿದ್ಯುತ್ ಲೈನ್‌ಗಳು ಹಳೆಯದಾಗಿದ್ದು ಲೈನ್‌ಗಳನ್ನು ನವೀಕರಿಸಲು ಕೋರಿ ಮಾನ್ಯ ಸಚಿವರಿಗೆ ಮನವಿ ಸಲ್ಲಿಸಿದರು.

ಸ್ಥಳೀಯ ಲೋಕಸಭಾ ಸದಸ್ಯರಾದ ಶ್ರೀ.ಎಂ.ಬಿ.ಚಂದ್ರಪ್ಪ ರವರು ಮಾತನಾಡಿ ಪಾವಗಡ ತಾಲ್ಲೂಕು [illegible] ತಾಲ್ಲೂಕು ಹಾಗೂ ಬರಪೀಡಿತ ತಾಲ್ಲೂಕು ಆಗಿದ್ದು ಅನೇಕ ತೊಂದರೆಗಳನ್ನು ಎದುರಿಸುತ್ತಿದೆ.ಮುಖ್ಯ

KP

ಇಂಧನ ಸಚಿವರು ಸಹ ರೈತರ ಮಕ್ಕಳಾಗಿದ್ದು ಅವರಿಗೆ ರೈತರ ಕಷ್ಟದ ಅರಿವು ಇರುತ್ತದೆ ಉತ್ತಮ ಬೆಲೆಯನ್ನು ನಿಗಧಿಪಡಿಸುವಂತೆ ಮಾನ್ಯ ಸಚಿವರನ್ನು ಕೋರಿದರು.

ವಿಧಾನ ಪರಿಷತ್ ಸದಸ್ಯರಾದ ಶ್ರೀ.ವಿ.ಎಸ್.ಉಗ್ರಪ್ಪ ರವರು ಮಾತನಾಡಿ ರಾಜ್ಯದಲ್ಲಿ ವಿದ್ಯುತ್ ಕೊರತೆ ಇದ್ದು ರಾಜ್ಯ ಹಾಗೂ ದೇಶದ ಅಭಿವೃದ್ಧಿ ಪೂರಕವಾದ ಈ ಯೋಜನೆಗೆ ಜಮೀನನ್ನು ಗುತ್ತಿಗೆ ನೀಡುತ್ತಿರುವ 6 ಗ್ರಾಮದ ಭೂಮಾಲೀಕರಿಗೆ ಅಭಿನಂದನೆಯನ್ನು ಸಲ್ಲಿಸಿದರು ಗುತ್ತಿಗೆಗೆ ಅವಶ್ಯವಿರುವ ಎಲ್ಲಾ ಕಾರ್ಯಗಳನ್ನು ಸರ್ಕಾರವೇ ನಿರ್ವಹಿಸಬೇಕು, ನೊಂದಣಿ ಶುಲ್ಕ ಸರ್ಕಾರವೇ ಭರಿಸಬೇಕು, ಪ್ರತಿ ಎಕರೆಗೆ ಪ್ರತಿ ವರ್ಷಕ್ಕೆ ಕನಿಷ್ಠ ಗುತ್ತಿಗೆ ದರ 20000/- ಕ್ಕಿಂತ ಕಡಿಮೆ ಆಗಬಾರದು. ಇಲ್ಲಿನ ಜನತೆಗೆ ಶೇ 25% ಉದ್ಯೋಗಾವಕಾಶ ನೀಡಬೇಕೆಂದು ಮಾನ್ಯ ಸಚಿವರಲ್ಲಿ ಕೋರಿದರು. ಈ ಗ್ರಾಮಗಳಿಗೆ ರಸ್ತೆ, ಕುಡಿಯುವ ನೀರು ಹಾಗೂ ಶಾಲೆಗಳ ದುರಸ್ತಿ ಎಲ್ಲಾ ಮೂಲಭೂತ ಸೌಕರ್ಯ ನೀಡಲು ಕೋರಿದರು.

ಮಾನ್ಯ ಇಂಧನ ಸಚಿವರು ಮಾತನಾಡಿ ರೈತರು ಜಮೀನು ಮಾರಿಕೊಳ್ಳದಂತೆ ಸರ್ಕಾರ ವಿನೂತನ ಯೋಜನೆಯನ್ನು ರೂಪಿಸಿದೆ. ಯಾವುದೇ ಮಧ್ಯವರ್ತಿಗಳ ಹಾವಳಿ ಇರುವುದಿಲ್ಲ.ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಉಪವಿಭಾಗಾಧಿಕಾರಿಗಳು ಮಧುಗಿರಿ, ತಹಶೀಲ್ದಾರ್ ಪಾವಗಡ ರವರು ಯೋಜನೆಗೆ ಒಳಪಡುವ ಜಮೀನಿಗೆ ಸಂಬಂಧಿಸಿದಂತೆ ಪಹಣಿ ಕಾಲಂ 3 ಮತ್ತು 9 ವ್ಯತ್ಯಾಸ ಸರಿಪಡಿಸುವಿಕೆ . ಪವತಿ ವಾರಸ್ಸು ಮೇರೆ ಖಾತೆ ಬದಲಾವಣೆ ಪ್ರಕ್ರಿಯೆ ಹಾಗೂ ಪಹಣಿ ತಿದ್ದುಪಡಿ ಕಾರ್ಯವನ್ನು ಶೀಘ್ರವಾಗಿ ಅಗತ್ಯ ದಾಖಲೆಗಳನ್ನು ಪರಿಶೀಲಿಸಿ ಅದ್ಯತೆ ಮೇರೆಗೆ ಇತ್ಯರ್ಥ ಪಡಿಸುವರು ಹಾಗೂ ಭೂಪರಿವರ್ತನೆಗೆ ಜಿಲ್ಲಾಧಿಕಾರಿಗಳ ಕಛೇರಿಯಿಂದ ಅಗತ್ಯ ಕ್ರಮ ಕೈಗೊಳ್ಳುವರು ಎಂದು ತಿಳಿಸಿದರು.

ಮಾನ್ಯ ಇಂಧನ ಸಚಿವರು ಕೆಳಕಂಡಂತೆ ಗುತ್ತಿಗೆ ಮೊತ್ತ ನಿಗಧಿಪಡಿಸುವುದಾಗಿ ತಿಳಿಸಿದರು.

1. ಪ್ರತಿ ಎಕರೆ ಜಮೀನಿಗೆ ಪ್ರತಿವರ್ಷಕ್ಕೆ 21000/- ರೂ ಗುತ್ತಿಗೆ ದರ ಆಗಿರುತ್ತದೆ.
2. ಭೂಮಾಲೀಕರ ಜಮೀನಿನಲ್ಲಿ ಸಮಾಧಿ/ ಗೋರಿ ಹಾಗೂ ಸ್ಮಶಾನಗಳು ಇದ್ದಲ್ಲಿ ಇವುಗಳನ್ನು ಸಂರಕ್ಷಿಸಲಾಗುವುದು.
3. ಗುತ್ತಿಗೆ ನೀಡುವ ಜಮೀನಿನಲ್ಲಿ ಚಾಲನೆಯಲ್ಲಿರುವ ಬೋರ್ ವೆಲ್‌ಗಳು ಹಾಗೂ ಬೆಲೆಬಾಳುವ ಮರಗಳು ಇದ್ದಲ್ಲಿ ಇದಕ್ಕೆ ಪ್ರತ್ಯೇಕ ಬೆಲೆ ನಿಗಧಿಪಡಿಸಲಾಗುವುದು.
4. ಪ್ರತಿ 2 ವರ್ಷಗಳಿಗೊಮ್ಮೆ ಶೇಕಡ 5% ರಷ್ಟು ಹೆಚ್ಚಿಸಲಾಗುವುದು.
5. ನೋಂದಣಿ ಹಾಗೂ ಇತರೆ ಎಲ್ಲಾ ಶುಲ್ಕ (ಭೂಕಂದಾಯ ಹೊರತುಪಡಿಸಿ) ಸರ್ಕಾರದಿಂದ ಭರಿಸಲಾಗುವುದು.
6. ಗುತ್ತಿಗೆ ಅವಧಿ 30 ವರ್ಷಗಳಾಗಿರುತ್ತದೆ.
7. ಎಲ್ಲಾ ರೀತಿಯ ಅನುಮೋದನೆಯನ್ನು ಸರ್ಕಾರಿ ಸಂಸ್ಥೆಗಳಿಂದಲೇ ಮಾಡಿಕೊಳ್ಳಲಾಗುತ್ತದೆ

KP Mun...

ಮುನ್ನ ಇಂಧನ ಸಚಿವರು ನಿಗಧಿಪಡಿಸಿದ ದರವನ್ನು ಸಭೆಯಲ್ಲಿ ಹಾಜರಿದ್ದ ಎಲ್ಲಾ ಭೂಮಾಲೀಕರಿಗೂ ತಿಳಿಸಿ ಕೈ ಎತ್ತುವ ಮೂಲಕ ಒಪ್ಪಿಗೆ ತಿಳಿಸಲು ಕೋರಲಾಗಿ ಸಭೆಯಲ್ಲಿ ಇದ್ದ ಎಲ್ಲಾ ಭೂಮಾಲೀಕರು ಸರ್ವಾನುಮತದಿಂದ ಸಮ್ಮತಿ ಸೂಚಿಸಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್, ಬೆಂಗಳೂರು ಇವರು ಸಭೆ ನಡೆಸಿಕೊಟ್ಟ ಜಿಲ್ಲಾಧಿಕಾರಿಗಳನ್ನು ಮತ್ತು ಎಲ್ಲಾ ಹಾಜರಿದ್ದ ಸದಸ್ಯರು ಹಾಗೂ ಅಧ್ಯಕ್ಷರಿಗೆ ವಂದಿಸಿದ ನಂತರ ಸಭೆ ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು
ತುಮಕೂರು ಜಿಲ್ಲೆ, ತುಮಕೂರು

ಗೆ
ಎಲ್ಲಾ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಅವಗಾಹನೆಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.